Reg. No. | | | | | | | | | |

# BSCKAL 203/FNDKAL 203/HRDKAL 203

**ಗುಣಾಂಕ ಆಧಾರಿತ ಮೂರನೆಯ ಸೆಮಿಸ್ಟರ್ ಬಿ.ಎಸ್ಸಿ/ಬಿ.ಎಸ್ಸಿ (ಎಫ್.ಎನ್.ಡಿ.)/ಬಿ.ಎ. (ಎಚ್.ಆರ್.ಡಿ.)**
**ಪದವಿ ಪರೀಕ್ಷೆ, ನವೆಂಬರ್/ ಡಿಸೆಂಬರ್ 2015**
**ಕನ್ನಡ ಭಾಷಾ ಪತ್ರಿಕೆ – III**
**(2014-15 Batch Onwards)**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

## ಭಾಗ – 1
## (ಕಾವ್ಯ)

I. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8=8)**

1) 'ಪುಸಿ ದಿಟಕ್ಕೆ ನಿಲ್ವುದೇ' ಕಾವ್ಯಭಾಗದ ಸ್ವಾರಸ್ಯವನ್ನು ವಿವರಿಸಿ.

2) ಅಕ್ಕಮಹಾದೇವಿಯ ವಚನಗಳಲ್ಲಿ ವ್ಯಕ್ತವಾಗಿರುವ ವಿಚಾರಗಳೇನು ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×6=6)**

1) 'ಮುಟ್ಟು' ಕವನದಲ್ಲಿ ವ್ಯಕ್ತಗೊಂಡಿರುವ ಸಂದೇಶವೇನು ?

2) ರಾವಣ ಮಂಡೋದರಿಯರ ನಡುವಿನ ಸಂಭಾಷಣೆಯನ್ನು ವಿವರಿಸಿ.

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : **(1×4=4)**

1) ಶತಶೃಂಗ ಪರ್ವತ

2) ಕುವೆಂಪು.

II. ಅ) ಒಂದು ಪದ್ಯಭಾಗದ ಭಾವ ಸ್ವಾರಸ್ಯವನ್ನು ವಿವರಿಸಿರಿ : **(1×5=5)**

1) ಪುಲಿದೊವಲುಡುಗೆಯ ಹಾವಿನ
ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂ
ದಲೆಗಳ ಮಾಲೆಯ ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ

P.T.O.

2) ಎಲ್ಲಿ ಕಾಂಬುದಿನಿತು ನಲ್ಮೆ ?
ಎಲ್ಲಿಯೆದೆಯ ಕೂರ್ಮೆ ಬಲ್ಮೆ ?
ಮಾದ್ರಿ ಮಡಿದಳೇನು ? ಅವಳ ಹಿಡಿದ ಮೃತ್ಯು ಮಡಿದುದು
ಮಡಿಯಲಾರದವಳ ಮೂರ್ತಿ !
ಜವನ ಕೈಯ ಸೊಡರ ಬೆಳಗಲವಳ ಚಿತೆಯ
ಕೆಂಡವು.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಮಹತ್ವ ವಿವರಿಸಿ : **(2×4=8)**

1) ಚಿನ್ನಾದ ಜೌಬಾಕಿ ಬಿಟ್ಟುಕೊಡುವೆ
2) ಸಿರಿವೆರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ
3) ಎಳೆ ಇಲ್ಲದ ಅನುಭೂತಿ ಅನುಭವಿಸು.

ಇ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) ಕೆಂಚಮ್ಮನ ಒಂದನೆಯ ತಿಂಗಳ ಬಸುರಿ ಬಯಕೆಯೇನು ?
2) ಮನುಜರ ಮೇಲೆ ಕಾವ್ಯರಚನೆ ಮಾಡುವುದಿಲ್ಲ ಎಂಬುದು ಯಾರ ಸಿದ್ಧಾಂತವಾಗಿದೆ ?
3) ಅಕ್ಕಮಹಾದೇವಿಯ ಜನ್ಮಸ್ಥಳ ಯಾವುದು ?
4) 'ನಲ್ಮೆ' ಕವನ ಸಂಕಲನದ ಕರ್ತೃ ಯಾರು ?

## ಭಾಗ – 2
## (ಕಾದಂಬರಿ)

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8=8)**

1) 'ಬೆಟ್ಟಸಾಲು ಮಳೆ' ಕಾದಂಬರಿಯಲ್ಲಿ ಗ್ರಾಮೀಣ ಬದುಕು ಹೇಗೆ ಬಿಂಬಿತವಾಗಿದೆ ?
2) ಕರಿತಿಮ್ಮ ಶೆಟ್ಟಿಯ ಪಾತ್ರವನ್ನು ಪರಿಚಯಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಅಶ್ವತ್ಥ ಆಸ್ಪತ್ರೆ ಸೇರುವಂತಾಗಲು ಕಾರಣವೇನು ? ವಿವರಿಸಿ.
2) ಹೊನ್ನ ಕೋಳಿ ಮಾರುವ ಸನ್ನಿವೇಶವನ್ನು ನಿರೂಪಿಸಿ.

ಇ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'ಬೆಟ್ಟಸಾಲು ಮಳೆ' ಕಾದಂಬರಿಕಾರ ಯಾರು ?
2) ಹೊಂಬನ ತಂದೆಯ ಹೆಸರೇನು ?

## ಭಾಗ – 3
## (ಗದ್ಯಭಾಗ)

IV. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : (1×8=8)

1) ಖಾಸಗಿ ವಲಯವು ದಲಿತರ ಪಾಲಿಗೆ ಸಂಚಿನ ವಲಯವಾಗಿದೆ ಎಂಬ ಲೇಖಕರ ಅಭಿಪ್ರಾಯವನ್ನು ಸಮರ್ಥಿಸಿ.

2) ಅಜ್ಜಯ್ಯನ ಅಭ್ಯಂಜನದ ಸ್ವಾರಸ್ಯವನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ವೈಚಾರಿಕ ಪ್ರಜ್ಞೆಗೆ ಅಡ್ಡಿಯಾಗುವ ಅಂಶಗಳನ್ನು ಕುರಿತು ಬರೆಯಿರಿ.

2) ಕಪ್ಪೆ ಶಾರದೆಯ ವ್ಯಕ್ತಿತ್ವವನ್ನು ಪರಿಚಯಿಸಿ.

ಇ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಜತ್ತಪ್ಪ ರೈಗಳ ಯಾವ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಬಂದಿದೆ ?

2) 'ತೆರದ ಮನ' – ಕೃತಿಯ ಕರ್ತೃ ಯಾರು ?

## ಭಾಗ – 4
## (ಕ್ರಿಯಾತ್ಮಕ ಕನ್ನಡ)

V. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : (1×8=8)

1) ಸಮೂಹ ಮಾಧ್ಯಮಗಳ ಲಕ್ಷಣ ಹಾಗೂ ಸ್ವರೂಪದ ಕುರಿತು ವಿವರಿಸಿ.

2) ಸಂಪಾದಕರಿಗೆ ಪತ್ರ ಎಂದರೇನು ? ಅದರ ಮಹತ್ವ ಮತ್ತು ಬರೆಯುವಾಗ ಗಮನಿಸಬೇಕಾದ ಅಂಶಗಳನ್ನು ತಿಳಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ಪತ್ರಿಕೋದ್ಯಮ ಮತ್ತು ಅದರ ಪ್ರಕಾರಗಳನ್ನು ತಿಳಿಸಿ.

2) ನುಡಿಚಿತ್ರ ಎಂದರೇನು ? ವಿವರಿಸಿ.

ಇ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) 'ಕ್ಷಣ ಹೊತ್ತು ಅಣಿ ಮುತ್ತು' ಇದು ಯಾರ ಅಂಕಣ ಬರಹ ?

2) ವಾರ್ಷಿಕ ವಿಶೇಷ ಸಂಚಿಕೆಯೊಂದನ್ನು ಹೆಸರಿಸಿ.